ಮೈಸೂರಿನ ಕೆ ಜಿ ಕೊವ್ವಲಿನಲ್ಲಿ ಓವರ್ ಹೆಡ್ ವಾಟರ್ ಟ್ಯಾಂಕ್ ನಿರ್ಮಾಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 98(320)

ಸದಸ್ಯರ ಹೆಸರು ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ(ಚಾಮರಾಜ)

ಉತ್ತರಿಸುವ ಸಚಿವರು ಶ್ರೀ ಬಿ ಬಿ ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು)

ಪ್ರಶ್ನೆ

ಅ) ಮೈಸೂರು ನಗರದ ಕನ್ನೇಗೌಡನ ಕೊಪ್ಪಲಿನ ಚಾಮರಾಜಪುರಂ ರೈಲ್ವೆ ಸ್ಟೇಷನ್ ಬಳಿ ಓವರ್‌ಹೆಡ್ ವಾಟರ್ ಟ್ಯಾಂಕ್ ನಿರ್ಮಾಣಕ್ಕೆ ಮಹಾನಗರ ಪಾಲಿಕೆ ನಿರ್ಣಯವನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದ್ದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಉತ್ತರ

ಅ) ಹೌದು ನದರಿ ಪ್ರದೇಶಕ್ಕೆ ನೀರು ಸರಬರಾಜನ್ನು ಅಭಿವೃದ್ಧಿಪಡಿಸಲು ರೂ 14 00 ಲಕ್ಷಗಳ ಅಂದಾಜಿಗೆ ನಗರಪಾಲಿಕೆ ಕೌನ್ಸಿಲ್ ಅನಿವೇಶನದ ನಡವಳಿಕೆ ಸಂ186 2000-01, ದಿನಾಂಕ 15-9-2000ದ ನಿರ್ಣಯವನ್ನು ಮಾಡಿ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಗಾಗಿ ಸಲ್ಲಿಸಿದ್ದು ಸರ್ಕಾರವು ಪರಿಗಣಿಸಲಿದೆ

ಆ) ಈ ಪ್ರಸ್ತಾವನೆಯ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ

ಬೈಲಹೊಂಗಲ ನಗರದಲ್ಲಿ ಒಳಚರಂಡಿ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 99(339)

ಸದಸ್ಯರ ಹೆಸರು ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯಮಂತ್ರಿಯವರು)

ಪ್ರಶ್ನೆ

1 ಬೆಳಗಾವಿ ಜಿಲ್ಲೆ ಬೈಲಹೊಂಗಲ ವಿಸ್ತರಣೆ ಪ್ರದೇಶದಲ್ಲಿ ಒಳಚರಂಡಿ ಯೋಜನೆ